ಬ್ಯಾಕ್‌ಲಾಗನ್ನು ಯಾವ ರೀತಿ ತುಂಬುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಅಲ್ಲದೇ ನಮ್ಮ ಬಿಜಾಪುರಕ್ಕೆ ಫೈರ್‌ಫೈಟಿಂಗ್ ಫೋರ್ಸನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅದನ್ನು ಯಾವಾಗ ಕೊಡುತ್ತಾರೆ ಎಂಬುದನ್ನು ಸಹ ಹೇಳಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ. ಶ್ರೀ ಪಂಪಾಪತಿಯವರು ಹೇಳಿದಂತೆ, ನಗರ ಪ್ರದೇಶದಲ್ಲಿ ಜನರು ತಿರುಗಾಡತಕ್ಕಂಥ ದಾರಿಯಲ್ಲಿ ರೈಲ್ವೆ ಗೇಟನ್ನು ಹಾಕಿರುವುದರಿಂದ ಸಂಚಾರಕ್ಕೆ ಅಡಚಣೆಯಾಗಿದೆ ; ಈ ಬಗ್ಗೆ ಕೇಂದ್ರ ರೈಲ್ವೆ ಸಚಿವರೊಡನೆ ಮಾತುಕತೆಯಾಡಿ ಅವರಿಂದ ಅನುಮತಿಯನ್ನು ತೆಗೆದುಕೊಂಡು ಅದನ್ನು ತೆಗೆಸಿ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದ್ದಾರೆ. ಇದನ್ನು ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ, ಒಂದು ವೇಳೆ ಕೇಂದ್ರ ರೈಲ್ವೆ ಸಚಿವರು ಅನುಮತಿ ಕೊಟ್ಟರೆ ಅದನ್ನು ತೆಗೆಸಿ ಜನರಿಗೆ ಸಹಾಯ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ಈ ಕೆಲಸವನ್ನು ತಾವು ಜಾಗ್ರತೆಯಾಗಿ ಮಾಡಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ಅದನ್ನು ನಾವು ಮಾಡುತ್ತೇವೆ. ಮತ್ತೆ ಮಾನ್ಯ ಸದಸ್ಯರಾದ ಶೀರ್ನಾಳಿ ಚಂದ್ರಶೇಖರ್‌ರವರು ಶಿವಮೊಗ್ಗದಲ್ಲಿ ಇರತಕ್ಕಂಥ ರೆಗ್ಯುಲೇಟೆಡ್ ಮಾರ್ಕೆಟನ್ನು ನಗರ ಪ್ರದೇಶದಿಂದ ದೂರ ತೆಗೆದುಕೊಂಡು ಹೋಗಿ ಹಾಕಿದ್ದಾರೆ ಎಂದು ಹೇಳಿದರಂ, ಅದಕ್ಕೆ ಕಾರಣವಿದೆ. ಅದನ್ನು ನಗರಕ್ಕೆ ಹತ್ತಿರದಲ್ಲಿ ಹಾಕಬೇಕು ಎನ್ನತಕ್ಕಂಥ ಬೇಡಿಕೆಯೂ ಇದೆ. ಅದನ್ನು ನಾವು ಪರಿಶೀಲಿಸುತ್ತೇವೆ. ಆಮೇಲೆ ಮಾನ್ಯ ಷೇರ್‌ಖಾನ್‌ರವರು ಚಿತ್ತಾಪುರ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಲದು, ಹೆಚ್ಚು ಕೊಡಬೇಕು ಎಂದು ಹೇಳಿದರು. ಈ ಬಗ್ಗೆ ಅಲ್ಲಿನ ಬೇಡಿಕೆ ಏನಿದೆ ಅದನ್ನು ನಾವು ಪರಿಶೀಲಿಸಿ ನಂತರ ಕೊಡುತ್ತೇವೆ. ನಾನು ಚಿತ್ತಾಪುರಕ್ಕೆ ಭೇಟಿ ನೀಡಿದ್ದಂತಹ ಕಾಲದಲ್ಲಿ ನಾನು ಆ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೂ ನಿಜ. ಹಾಗೆಯೇ ನಮ್ಮ ಶ್ರೀ ಪ್ರಭಾಕರ್ ತೇಲ್ಕರ್‌ರವರು ಅಲ್ಲಿರತಕ್ಕಂಥ ಒಂದು ಬ್ರಿಡ್ಜ್ ವಿಷಯ ಹೇಳಿದರು. ಇವುಗಳನ್ನು ಪರಿಶೀಲಿಸುತ್ತೇವೆ,

೩-೦೦ ಪಿ.ಎಂ.

ಮಾನ್ಯ ಅಧ್ಯಕ್ಷರೇ, ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಂತಹ ಕೆಲವು ಜನರನ್ನು ಈಗಾಗಲೇ ಖಾಯಂಗೊಳಿಸಿದ್ದೇವೆ. ಇನ್ನೂ ಕೆಲವು ಜನ ನೌಕರರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆದರೂ ಕೂಡ ಅವರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೇ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ತಿಮ್ಮೇಗೌಡರು ಮಾತನಾಡುತ್ತಾ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ದಳ್ಳಾಳಿಗಳಿಂದ ಶೋಷಣೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬರೀ ದಳ್ಳಾಳಿಗಳಿಂದಲೇ ರೈತರ ಶೋಷಣೆಯಾಗುತ್ತಿಲ್ಲ, ಲಾರಿ ಮಾಲೀಕರಿಂದಲೂ ಒಂದು ರೀತಿಯಲ್ಲಿ ರೈತರ ಶೋಷಣೆಯಾಗುತ್ತಿದೆ. ಆದ್ದರಿಂದ ಸರ್ಕಾರ ಇದನ್ನು ತಪ್ಪಿಸುವುದಕ್ಕಾಗಿ ಸಬ್ ಮಾರ್ಕೆಟ್ ಅಧಿಕಾರಿಗಳನ್ನು ನೇಮಕ ಮಾಡಿ ಸೂಕ್ತ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವಿ. ಬಿ. ಭಾವೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಮ್ಮ ಇಲಾಖೆಗೆ ಸಂಬಂಧಪಡದೆ ಇದ್ದರೂ ಸಹ ಮಾನ್ಯ ಸದಸ್ಯರ ಮನವಿಯನ್ನು ಅಂಗೀಕಾರ ಮಾಡಿ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳ ಉದಾರ ಭಾವನೆಯನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳನ್ನು ಅಂತರ್‌ಗತವಾಗಿ ಮಾತನಾಡಿ ನೋವನ್ನುಂಟು ಮಾಡಿದ್ದಾರೆ.

MR. DEPUTY SPEAKER.—I am on my legs.

SRI H. GANGADHARAN.—If the Hon'ble Mini ter is not going to promise to place White Paper on this matter we will walk out.

(Sri H. Gangadharan and Sri Jartargar withdrew from the House)